

ಇಲ್ಲವಂತೆ. ಅವರ ಪಂಚಿಂಗ್, ಚುರುಕಾದ ಸಂಭಾಷಣೆ ಕನ್ನಡಿಗರ ಮನೆ ಮನದಲ್ಲಿ ನೆಲಸಿದೆ. ಅದೇನೋ ನಿಜ. ಆದರೆ ಆ ಬರಹಗಳನ್ನು ಕಾರ್ಖಾನೆಯ ಉತ್ಪಾದನೆ ಲೆಕ್ಕದಲ್ಲಿ ತೂಕ ಹಾಕಿದರೂ ಅತಿ ಹೆಚ್ಚು ಉತ್ಪಾದಿಸಿದ ಪ್ರಶಸ್ತಿಯೂ ನಿಸ್ಸಂಶಯವಾಗಿಯೂ ಅವರಿಗೇ ಲಭಿಸುವುದಂತೆ!

ಕಳೆದ ಆರೇಳು ವರ್ಷಗಳಿಂದ ಫೈನಲ್ ಕಟ್‌ಗೆ ಸಾವಿರಾರು ಹಾಸ್ಯ ಸಂಚಿಕೆ ನಿರ್ದೇಶಿಸಿ ಮತ್ತೊಂದು ದಾಖಲೆ ನಿರ್ಮಿಸಿದವರೆಂದರೆ ನಿರ್ದೇಶಕ ಮುನಿ ಜನಪದ ಅವರು. 'ಸಿದ್ಲಿಂಗು' ಸಿನಿಮಾದ ನಿರ್ದೇಶನಕ್ಕಿಂತ ಮೊದಲು ವಿಜಯ ಪ್ರಸಾದ್ ಫೈನಲ್‌ಕಟ್ ಹಾಸ್ಯ ಧಾರಾವಾಹಿಗಳ ನಿರ್ದೇಶಕನ ಸ್ಥಾನದಲ್ಲಿದ್ದರು. ಆ ಸ್ಥಾನವನ್ನು ಯಶಸ್ವಿಯಾಗಿ ತುಂಬಿದವರು ಮುನಿ ಜನಪದ. ಈ ಎರಡೂ ಧಾರಾವಾಹಿಗಳಿಗೆ ಆರಂಭದಿಂದ ಕಣ್ಣು ಹಾಯಿಸಿದವರು ಅಂದರೆ ಕ್ಯಾಮೆರಾಮನ್‌ಗಳು ಮಹೇಂದ್ರ ಚಿಟ್ಟಿಬಾಬು ಹಾಗೂ ಪ್ರಸನ್ನ (ಜೀವ). ಅವರದೂ ಒಂದು ದಾಖಲೆಯೇ. ರುದ್ರೇಶ್ ಕಥೆ, ಮೂರ್ತಿ ಸಂಭಾಷಣೆ, ಕಲಾವಿದರ ಟೈಮಿಂಗ್ ಹಾಗೂ ಮುನಿ ನಿರ್ದೇಶನ ಎಲ್ಲರ ಶ್ರಮವೂ ಹಾಸ್ಯದ ಒಟ್ಟಂದಕ್ಕೆ ಕಾರಣವಾಗಿದೆ.

'ಚಿತ್ರೀಕರಣಕ್ಕಾಗಿಯೇ ಎರಡು ಮನೆಗಳನ್ನು ಶಾಶ್ವತವಾಗಿ ಬಾಡಿಗೆಗೆ ಪಡೆಯಲಾಗಿದೆ. ಧ್ವನಿಗ್ರಹಣ, ಸಂಕಲನ ಮುಂತಾದ ಕಾರಣಕ್ಕೆ ದೊಡ್ಡದೊಂದು ಕಚೇರಿ ಇದೆ. ಈ ಎಲ್ಲಾ ಕಡೆ ಕಾರ್ಯ ನಿರ್ವಹಿಸುವ ಸಿಬ್ಬಂದಿ, ತಂತ್ರಜ್ಞರು, ಕಲಾವಿದರು ಸೇರಿ ನಿತ್ಯ ಸುಮಾರು ನೂರು ಜನಕ್ಕೆ ನಮ್ಮದೇ ಅಡುಗೆ ವ್ಯವಸ್ಥೆ ಮಾಡಿಕೊಂಡಿದ್ದೇವೆ' ಎನ್ನುತ್ತಾರೆ ಧಾರಾವಾಹಿಗಳ ನಿರ್ಮಾಣ ವ್ಯವಸ್ಥಾಪಕ ಅರವಿಂದ ಶಶಿ.

ಅತಿ ಹೆಚ್ಚು ಹಾಸ್ಯ ಧಾರಾವಾಹಿಗಳನ್ನು ನಿರ್ದೇಶಿಸಿದ ನಂತರದ ಸ್ಥಾನ ಪೃಥ್ವಿರಾಜ ಕುಲಕರ್ಣಿ ಅವರದು. 700ಕ್ಕೂ ಅಧಿಕ 'ಪಾರ್ವತಿ ಪರಮೇಶ್ವರ' ಸಂಚಿಕೆ ನಿರ್ದೇಶಿಸಿ ಅಲ್ಲಿಂದ ಹೊರಬಂದ ಪೃಥ್ವಿ ಅವರು, ಇದೀಗ ತಮ್ಮ ಅಣ್ಣ ಗುರುರಾಜ ಕುಲಕರ್ಣಿ ಅವರ ನಿರ್ಮಾಣದಡಿಯಲ್ಲಿ ಸುವರ್ಣ ವಾಹಿನಿಗಾಗಿ 'ಪಂಚರಂಗಿ ಪೋಂ ಪೋಂ' ಹಾಸ್ಯ ಧಾರಾವಾಹಿ ನಿರ್ದೇಶಿಸುತ್ತಿದ್ದಾರೆ.

ಕರಾವಳಿ, ಉತ್ತರ ಕರ್ನಾಟಕ, ಹಳೇ ಮೈಸೂರು ಭಾಗದ ಆಡುಭಾಷೆಯನ್ನು ಸ್ಪಷ್ಟವಾಗಿ ಮಾತನಾಡುವ 6–7 ಪಾತ್ರಧಾರಿಗಳು ತಮ್ಮ ಮಾತಿನ ವೈಖರಿ ಹಾಗೂ ಅಭಿನಯ ಸಾಮರ್ಥ್ಯದಿಂದ ಇದನ್ನು ಸರಿದೂಗಿಸಿಕೊಂಡು ಹೋಗುತ್ತಾರೆ. ಈ ಧಾರಾವಾಹಿ ಕಲಾವಿದರು ಬಹುತೇಕ ಹೊಸಬರು. ಆದರೆ ಆಯಾ ಪ್ರಾಂತದ ಸೊಗಸಾದ ಆಡುಭಾಷೆ ಧಾರಾವಾಹಿಯ ಯಶಸ್ಸಿಗೆ ಪ್ರಮುಖ ಕಾರಣವಾಗಿದೆ. ಶೀತಲ್, ದಾನಪ್ಪ ಮಹಾಲಿಂಗಪುರ, ಬಸವರಾಜ ಕಟ್ಟಿಯವರ ಕಿತ್ತೂರು ಕರ್ನಾಟಕದ ಆಡುಭಾಷೆ; ರಾಘವೇಂದ್ರ– ಹರಿಣಿಯವರ ಮಂಗಳೂರು ಭಾಷೆ; ನಟನಾ ಮಂಜು ಅವರ ಮಂಡ್ಯಭಾಷೆ; ಜಂಬೆ ಅವರ ಬೆಂಗಳೂರು ಆಡುಭಾಷೆ; ಎಲ್ಲ ಭಾಗದ ಆಡುಭಾಷೆಯನ್ನು ಸಲೀಸಾಗಿ ಮಾತನಾಡಬಲ್ಲ ಶ್ವೇತಾ ಶ್ರೀನಿವಾಸ್

## ಕಟ್ಟೆ ಹಾಕಿಕೊಂಡವರು!

ಹಾಸ್ಯ ಧಾರಾವಾಹಿಗಳಲ್ಲಿ ಐದಾರು ಪಾತ್ರಧಾರಿಗಳ ಸನ್ನಿವೇಶಗಳು ನಿತ್ಯವೂ ಇರುತ್ತವೆ. ಇವರಿಗೆ ತಿಂಗಳಲ್ಲಿ 20ರಿಂದ 25 ದಿನ ಚಿತ್ರೀಕರಣ ಅನಿವಾರ್ಯ. ಒಮ್ಮೆ ಹಾಸ್ಯ ಧಾರಾವಾಹಿಯ ಪ್ರಮುಖ ಪಾತ್ರಕ್ಕೆ ಒಪ್ಪಿಕೊಂಡರೆಂದರೆ ಮತ್ತಾವುದರಲ್ಲೂ ಅಭಿನಯಿಸಲು ಸಾಧ್ಯವಿಲ್ಲ. ವರ್ಷಾನುಗಟ್ಟಲೆ ಒಂದೇ ಪಾತ್ರ ಅಭಿನಯಿಸಿದ ಏಕತಾನತೆಯೋ ಅಥವಾ ಇದಕ್ಕಿಂತ ಒಳ್ಳೆಯ ಅವಕಾಶ, ಧಾರಾವಾಹಿ ಅಥವಾ ಸಿನಿಮಾದಲ್ಲಿ ಸಿಕ್ಕಿದೆಯೆಂದೋ ಕಲಾವಿದರು ಕೈಕೊಟ್ಟು ಹೋಗುವ ಪ್ರಸಂಗಗಳು ಆಗಾಗ ಸೃಷ್ಟಿಯಾಗುವುದುಂಟು.

'ಪಾರ್ವತಿ ಪರಮೇಶ್ವರ' ಧಾರಾವಾಹಿಯ ಲಾಯರ್ ಗುಂಡಣ್ಣನ ಪಾತ್ರಧಾರಿ ಲೋಕೇಶ್ ಬಸವಟ್ಟಿ ಮತ್ತು ವೈಶಾಲಿ ಪಾತ್ರಧಾರಿ ನಿರ್ಮಲಾ, 'ಪಾಂಡುರಂಗ ವಿಠಲ'ದ ಜಹಾಂಗೀರ್, ಬಿ.ಜಯಮ್ಮ, ಮೇಘಾಶ್ರೀ, ಸತೀಶ್ಚಂದ್ರ ಮುಂತಾದವರಿಗೆ ಕಳೆದ ನಾಲ್ಕು ವರ್ಷಗಳಿಂದ ಬೇರೆ ಪಾತ್ರಗಳತ್ತ ತಿರುಗಿ ನೋಡಲೂ ಪುರುಸೊತ್ತಾಗಿಲ್ಲ.

ಪಂಚರಂಗಿ ಪೋಂ ಪೋಂ

